ಅ.ದಾ. ನಂಃ 42-2013 ಪಿಡಬ್ಲೂಃ 1

ಸಾಕ್ಷಿಯ ಹೆಸರುಃ | ಸಣ್ಣಮ್ಮಾ ಕೋಂ ಮನೋಹರ ಗೊಂಡ

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 28-6-2016

ಮುಂದುವರೆದ ಪಾಟೀ ಸವಾಲುಃ- ಶ್ರೀ ಕೆ ಆರ್ ಡಿ ವಕೀಲರಿಂದಃ-

ನನ್ನ ಗಂಡ ಸೇವೆಯಲ್ಲಿದ್ದಾಗ ಅವರು ಸೇವೆ ಸಲ್ಲಿಸುತ್ತಿರುವ ಸ್ಥಳಗಳಲ್ಲಿಯೇ ವಾಸವಾಗಿ ಬಂದಿದ್ದರು ಎಂದರೆ ಸರಿ. ನನ್ನ ಮತ್ತು ನನ್ನ ಗಂಡನ ವಿವಾಹ ಪ್ರೇಮ ವಿವಾಹ ಎಂದರೆ ಸರಿ. ಹಿರಿಯರೆಲ್ಲರೂ ಬಂದು ಮದುವೆ ನಡೆಸಿಕೊಟ್ಟಿರುತ್ತಾರೆ. ಎರಡನೇಯ ಪ್ರತಿವಾದಿಯ ಮದುವೆ ನಮ್ಮ ಮದುವೆಗಿಂತ ಪೂರ್ವದಲ್ಲಿ ಅಂದರೆ ಅಂದಾಜು 1980 ರಲ್ಲಿ ಆಗಿರಬಹುದು. ನಮ್ಮ ಮದುವೆ 1986 ರಲ್ಲಿ ಆಗಿತ್ತು. ದಾವಾ ಆಸ್ತಿ ಭೂ ನ್ಯಾಯ ಮಂಡಳಿಯಿಂದ ಮಂಜೂರಾದ ಆಸ್ತಿ ಎಂದೆರ ಸರಿ. ದಾವಾ ಆಸ್ತಿಯ ಭೂ ಒಡೆಯವರು ಯಾರಾಗಿದ್ದರು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ನನ್ನ ಮಾವ ಸೈರೊಬಾ ಆಪಾ ಗುರವ ಗೇಣಿ ಪಡೆದುಕೊಂಡು ಸ್ವಂತಾರ್ಜಿತ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ಅವರೂ ಜೀವಂತವಿರುವವರೆಗೂ ಸದರಿ ಗೇಣಿ ಜಮೀನಿಗೆ ಅವರಿಗೆ ಸಂಪೂರ್ಣವಾದ ಹಕ್ಕಿತ್ತು ಎಂದರೆ ಸರಿ. ಅವರ ಜೀವಿತ ಕಾಲದಲ್ಲಿ ಈ ದಾವೆ ವಾದಿಗಾಗಲೀ, ನನ್ನ ಗಂಡನಿಗಾಗಲೀ ಅಥವಾ ಎರಡನೇಯ ಪ್ರತಿವಾದಿಗಾಗಲೀ ಯಾವುದೇ ರೀತಿಯ ಹಕ್ಕು ಇರಲಿಲ್ಲವೆಂದರೆ ಸರಿ. ನನ್ನ ಮಾವನಿಗೆ ನಿಪಿ-4 ರ ಮೂಲಕ ದಾವಾ ಆಸ್ತಿ ಭೂ ನ್ಯಾಯ ಮಂಡಳಿಯಿಂದ ಮಂಜೂರಾಗಿದೆ ಎಂದರೆ ಸರಿ. ನಿಪಿ-5 ರಂತೆ ನನ್ನ ಮಾವನವರ ಹೆಸರಿಗೆ ಫಾರ್ಮ ನಂ. 10 ನ್ನು ಸಹ ನೀಡಲಾಗಿತ್ತು ಎಂದರೆ ಸರಿ. ದಾವಾ ಜಮೀನು ನನ್ನ ಮಾವನಿಗೆ ಅವರ ತಂದೆಯಿಂದ ಬಂದ ಜಮೀನು ಎಂದು ತೋರಿಸಲು ನನ್ನ ಹತ್ತಿರ ಯಾವ ದಾಖಲೆಗಳಿಲ್ಲ. ನಾನು ದಾವಾ ಆಸ್ತಿಯನ್ನು ನನ್ನ ಮಾವನಿಗೆ ಅವರ ಅಜ್ಜನ ಕಾಲದಿಂದ ಬಂದಿರುವ ಆಸ್ತಿಯೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನನ್ನ ಗಂಡ ಅವರ ತಂದೆ ಮಾತು ಕೇಳದೆ ನನ್ನನ್ನು ಮದುವೆಯಾಗಿದ್ದಾರೆಂದು ಅವರ ತಂದೆಗೆ ಆತನ ಮೇಲೆ ಬೇಜಾರು ಇತ್ತು ಎಂದರೆ ಸರಿಯಲ್ಲ. ನನ್ನ ಮಾವನ ಮನೆ ಸರ್ವೆ ನಂ. 158 ಹಿಸ್ಸಾ 2 ರಲ್ಲಿದೆ ಎಂದರೆ ಸರಿ. ಸದರಿ ಮನೆಯನ್ನು ನನ್ನ ಗಂಡ ಮತ್ತು ಬಾವ ಸೇರಿ ಕಟ್ಟಿಸಿರುತ್ತಾರೆ. ನನ್ನ ಮಾವ ಅದರ ಉಸ್ತುವಾರಿ ನೋಡಿಕೊಂಡಿರುತ್ತಾರೆ. ನಾನು ಹಾರ ಪಡಿಸಿರುವ ಪತ್ರಗಳು ಮನೆ ಕಟ್ಟುವ ಸಲುವಾಗಿ ಬರೆದಿರುವ ಪತ್ರಗಳು ಎಂದರೆ ಸರಿಯಲ್ಲ. ಸಾಕ್ಷಿ ಸದರಿ ಪತ್ರಗಳು ನನ್ನ ಮಾವ ಮತ್ತು ಬಾವನವರು ಬರೆದ ಪತ್ರಗಳು. ನನ್ನ ಬಾವ ಎಂದರೆ ಈ ದಾವೆಯ ವಾದಿ. ನನ್ನ ಬಾವ ನನ್ನಿಂದ ಜೀವನಾಂಶಕ್ಕಾಗಿ ಪತ್ರ ಬರೆದಿಲ್ಲ ಆದರೆ ನಮ್ಮ ಅತ್ತೆ ಮಾವನವರ ಜೀವನಾಂಶಕ್ಕಾಗಿ ಪತ್ರ ಬರೆಯುತ್ತಿದ್ದರು. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

2007 ಕ್ಕಿಂತ ಪೂರ್ವದಲ್ಲಿ ಅಂದರೆ ವಿಲ್‌ನಾಮೆ ಮಾಡುವ ಪೂರ್ವದಲ್ಲಿ ನಮ್ಮ ಅತ್ತೆ ಮಾವನನ್ನು ನೋಡಿಕೊಳ್ಳುವ ಕುರಿತು ಪಂಚಾಯತಿ ನಡೆದಿತ್ತು ಎಂದರೆ ಸರಿಯಲ್ಲ. ಸದರಿ ಪಂಚಾಯತಿ ಮೋಹನ ಗುರವ ಮತ್ತು ಪ್ರಮೋದ ಶಾಂತಾ ಕಿನ್ನಕರ ರವರ ಸಮಕ್ಷಮ ನಡೆದಿತ್ತು ಎಂದರೆ ಸರಿಯಲ್ಲ. ಪ್ರಮೋದ ಕಿನ್ನರಕರ ಎಂದರೆ ಎರಡನೇಯ ಪ್ರತಿವಾದಿಯರ ಗಂಡ. ಅವರಿಗೆ ನಮ್ಮ ವಿರುದ್ಧ ಸುಳ್ಳು ಸಾಕ್ಷಿ ಹೇಳಲು ಯೂವುದೇ ದ್ವೇಷವಿಲ್ಲ ಎಂದರೆ ಸರಿ. ನಾವು ಸದರಿ ಪಂಚಾಯತ್‌ನಲ್ಲಿ ನನ್ನ ಮಾನನಿಗೆ ಸಂಬಂದಪಟ್ಟ ಆಸ್ತಿಯನ್ನು ಮಾರಾಟ ಮಾಡಿ ಅಥವಾ ಅದನ್ನು ಅವರೇ ಪರಾಧೀನ ಮಾಡಿ ಅವರ ಪೋಷಣೆಯನ್ನು ಅವರೇ ಮಾಡಿಕೊಳ್ಳಲು ನಾವು ಹೇಳಿದ್ದೇವೆಂದರೆ ಸರಿಯಲ್ಲ. ಆ ಕಾರಣದಿಂದ ಸದರಿ ಪಂಚಾಯತಿನಲ್ಲಿ ಆದ ತೀರ್ಮಾನದಂತೆ ವಾದಿಯೇ ಅವರನ್ನು ನೋಡಿಕೊಳ್ಳುತಿದ್ದರು ಎಂದರೆ ಸರಿಯಲ್ಲ. ವಾದಿ 5-6 ವರ್ಷಗಳ ಹಿಂದೆ ಸೇವೆಯಿಂದ ನಿವೃತ್ತಿ ಹೊಂದಿದ್ದಾನೆ ಎಂದರೆ ಸರಿ. ನಿವೃತ್ತಿಯಾದ ನಂತರ ತನ್ನ ಅತ್ತೆ ಮಾವನೊಟ್ಟಿಗೆ ಅವರ ಮನೆಯಲ್ಲಿ ವಾಸವಾಗಿದ್ದಾನೆಂದರೆ ಸರಿ. ಎರಡನೇಯ ಪ್ರತಿವಾದಿ ಅವಳ ಗಂಡನ ಮನೆಯಲ್ಲಿ ವಾಸವಾಗಿದ್ದಾಳೆಂದರೆ ಸರಿ. ಆ ಕಾರಣದಿಂದ ವಾದಿಯೇ ತನ್ನ ತಂದೆ ತಾಯಿ ಪೋಷಣೆ ಮಾಡಿಕೊಂಡು ಬಂದಿದ್ದಾನೆ ಎಂದರೆ ಸರಿಯಲ್ಲ. ನಮ್ಮ ಮಕ್ಕಳ ವಿದ್ಯಾಭ್ಯಾಸ ಸಿದ್ದರದಲ್ಲಿ ಆಗಲಿಲ್ಲ. ಕುಮಟಾದಲ್ಲಿ ಆಗಿದೆ. ವಾದಿ ನನ್ನ ಅತ್ತೆ ಮಾವನ ಪೋಷಣೆ ಮಾಡಿದ್ದರಿಂದ ಅವರು ಆತನ ಹೆಸರಿಗೆ ದಾವಾ ಆಸ್ತಿಗೆ ಸಂಬಂದಪಟ್ಟಂತೆ ದಿಃ 5-7-2012 ರಂದು ಸಾಕ್ಷಿದಾರರ ಸಮಕ್ಷಮ ವಿಲ್‌ನಾಮೆ ಬರೆಸಿದ್ದಾರೆಂದರೆ ಸರಿಯಲ್ಲ.

ನನ್ನ ಮಾವನ ಪೋಟೊ ನೋಡಿದರೆ ನಾನು ಗುರುತಿಸುತ್ತೇನೆ. ಸಾಕ್ಷಿಗೆ ನಿಪಿ-7ರ ದಾಖಲೆಯ 1 ನೇ ಪುಟದ ಹಿಂದೆ ಇರುವ ಪೋಟೋಗಳನ್ನು ಜತೋರಿಸಲಾಗಿ ಸಾಕ್ಷಿ ಅದರಲ್ಲಿರುವ ಪೋಟೋಗಳನ್ನು ಗುರುತಿಸಿ ಸದರಿ ಎರಡು ಪೋಟೋಗಳಲ್ಲಿ ಇರುವ ವ್ಯಕ್ತಿ ತನ್ನ ಮಾವ ಎಂದು ಗುರುತಿಸಿರುತ್ತಾರೆ. ಆದ್ದರಿಂದ ಸದರಿ ಎರಡು ಪೋಟೋಗಳನ್ನು ಕ್ರಮವಾಗಿ ನಿಪಿ-7 ಡಿ ಮತ್ತು ನಿಪಿ-7 ಇ ಎಂದು ಗುರುತಿಸಲಾಯಿತು. ನಿಪಿ-7 ರ ದಾಖಲೆಯಲ್ಲಿ ಸಾಕ್ಷಿದಾರರೆಂದು ಸಹಿ ಮಾಡಿರುವ ಪಾವಟೋ ನರಸು ಗುರವ ಸಿದ್ದರ ದವರು ಎಂದರೆ ಸರಿ. ಅವರು ಶಿಕ್ಷಕರು ಎಂದರೆ ಸರಿ. ನಮ್ಮ ಮತ್ತು ಅವರ ನಡುವೆ ಯಾವುದೇ ವೈಮನಸ್ಸು ಇಲ್ಲ. ನನ್ನ ಮಾವನವರು ತಮ್ಮ ಮನಸ್ಸಿಗೆ ಸರಿ ಕಂಡಂತೆ ವಾದಿ ಹೆಸರಿಗೆ ವಿಲ್‌ನಾಮೆ ಬರೆಸಿದ್ದಾರೆಂದರೆ ಸರಿಯಲ್ಲ. ಯಾವುದೇ ಕಾರಣವಿಲ್ಲದೇ ನಾನು ತಕರಾರು ಮಡುತ್ತಿದ್ದೇನೆಂದರೆ ಸರಿಯಲ್ಲ. ಆ ರೀತಿ ನನಗೆ ತಕರಾರು ಮಾಡಲು ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಿವಿಲ್ ಜಡ್ಜ ಕಾರವಾರ